KATK900005432019

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು

**ಎಸ್.ಸಿ.ಸಂಖ್ಯೆಃ 10039/2019**

**ಪ್ರಮಾಣೀಕರಿಸಿದ ದಿನಾಂಕಃ 27.03.2023**
**ಚಾ.ಸಾ-1**
**ಫಿರ್ಯಾ.ಸಾ-2**

| | |
|---|---|
| ಹೆಸರು | ಸುಮಾ |
| ಗಂಡನ ಹೆಸರು | ಸುರೇಶ್ |
| ವಯಸ್ಸು | 48 ವರ್ಷ |
| ಉದ್ಯೋಗ | ಕೂಲಿಕೆಲಸ |
| ವಾಸಸ್ಥಳ | ತಂಡಗ ಗ್ರಾಮ, ದಬ್ಬೇಘಟ್ಟ ಹೋಬಳಿ, ತುರುವೇಕೆರೆ ತಾಲ್ಲೂಕು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಮೃತ ಸುರೇಶ್ ನನ್ನ ಗಂಡ. ಚಾ.ಸಾ-2 ಗಜೇಂದ್ರ ನನ್ನ ಮಗ. ನನ್ನ ಗಂಡ ತೀರಿಕೊಂಡು 4 ವರ್ಷ ಆಯಿತು. ಘಟನೆ ನಡೆದ ದಿನ ನಾನು ಮತ್ತು ನನ್ನ ಗಂಡ ರಾತ್ರಿ 7.30 ಗಂಟೆ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದೆವು. ನಂತರ ನನ್ನ ಗಂಡ ಊಟ ಮಾಡಿ ರಾತ್ರಿ 8.00 ಗಂಟೆಗೆ ಮನೆಯಿಂದ ಹೊರಗೆ ಹೋದರು. ಮನೆಯಿಂದ ಹೊರಗೆ ಹೋದವರು ವಾಪಸ್ಸು ಮನೆಗೆ ಬರಲಿಲ್ಲ. ರಾತ್ರಿ 9.00 ಗಂಟೆಗೆ ನನ್ನ ಗಂಡ ನನಗೆ ಫೋನ್ ಮಾಡಿದ್ರು. ನಾನು ಹಲೋ ಎಂದೆ ಆತ ಮಾತನಾಡಲಿಲ್ಲ. ನಂತರ ಮರುದಿನ ಬೆಳಿಗ್ಗೆ 6.00 ಗಂಟೆಗೆ ನನ್ನ ಗಂಡನನ್ನು ಯಾರೋ ಕೊಲೆ ಮಾಡಿ ರಾಮಮಂದಿರದ ಹತ್ತಿರ ಕೂರಿಸಿದ್ದಾರೆ ಎಂದು ತಿಳಿಸಿದ್ರು. ನಾನು ಹೋಗಿ ನೋಡಿದೆ. ರಾಮಮಂದಿರದ ಬಳಿ ನನ್ನ ಪತಿ ಕುಳಿತುಕೊಂಡಿದ್ದ ಸ್ಥಿತಿಯಲ್ಲಿಯೇ ಮೃತಪಟ್ಟಿದ್ರು. ತಲೆಯ ಎಡಭಾಗದಲ್ಲಿ ಒಡೆದಿತ್ತು. ಬಟ್ಟೆಗೆಲ್ಲಾ ರಕ್ತ ಆಗಿತ್ತು, ತಲೆಯಲ್ಲಿ ರಕ್ತಗಾಯ

ಆಗಿತ್ತು, ಮೂಗಿನಲ್ಲಿ ರಕ್ತ ಸುರಿದಿತ್ತು. ಅವರನ್ನು ನೋಡಿದಾಗ ಯಾರೋ ಕೊಲೆ ಮಾಡಿದ್ರು ಅನ್ನಿಸಿತು. ಪೋಲಿಸನವರಿಗೆ ನಾನು ದೂರು ಕೊಟ್ಟೆ

**(ಯು.ಡಿ.ಆರ್ ದಾಖಲೆ ಇಲ್ಲದೆ ಇದ್ದ ಕಾರಣ ಮುಂದುವರಿದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಪಾಟೀಸವಾಲು, ಆರೋಪಿ ಪರ ಶ್ರೀ.ಎಂ.ಡಿ.ವಕೀಲರಿಂದಃ**

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**